ಸಾಕ್ಷಿಯು ಕ್ರಮವಾಗಿ ಪ್ರಮಾಣಿಕರಿಸಿದ ದಿನಾಂಕಃ **20-01-2025**

ಪಾಟಿ ಸವಾಲುಃ ಶ್ರೀ. ಹೆಚ್.ಎಸ್.ಸಿ ವಕೀಲರಿಂದ

ನಾನು **2015** ರಲ್ಲಿ ಶನಿವಾರಸಂತೆಯಲ್ಲಿ ವಾಸವಾಗಿದ್ದೆ. ನನ್ನ ಕಚೇರಿ ಮೊದಲು ಶನಿವಾರಸಂತೆಯಲ್ಲಿತ್ತು ಎಂದರೆ ಸರಿ. ನ್ಯಾಯಾಲಯದ ಹತ್ತಿರ ಪಕ್ಷಗಾರರು ನನಗೆ ಮಾಹಿತಿ ಕೊಟ್ಟಿರುತ್ತಾರೆ. ಬರವಣಿಗೆಯನ್ನು ಎಲ್ಲಿ ಮಾಡಿಸಿರುತ್ತೇನೆ ಎಂದು ನೆನಪಿಲ್ಲ. ಮಾಹಿತಿ ಕೊಟ್ಟ ನಂತರ ನಾನು ದಾಖಲೆಯನ್ನು ತಯಾರಿಸಿದ್ದು, ಆ ನಂತರದಲ್ಲಿ ಪಕ್ಷಗಾರರು ಬಂದಿರುತ್ತಾರೆ, ದಾಖಲೆ ತಯಾರಿಸುವ ಸಮಯದಲ್ಲಿ ಪಕ್ಷಗಾರರು ಇರಲಿಲ್ಲ. ಪಕ್ಷಗಾರರ ಜೊತೆ ಸಂಬಂಧಿಕರು ಬಂದಿದ್ದರು ಅವರು ಯಾರು ಎಂದು ಗೊತ್ತಿಲ್ಲ. ಈ ವಿಚಾರವನ್ನು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿಲ್ಲ. ಈಶ್ವರ್ ರವರು ಬಂದಿರಲಿಲ್ಲ. ಮಾಹಿತಿ ಕೊಡುವಾಗ ಅವರ ಆರೋಗ್ಯ ಚೆನ್ನಾಗಿರಲಿಲ್ಲ ಎಂದರೆ ಸರಿಯಲ್ಲ. ಮರಣ ಶಾಸನ ಬರೆಯುವಾಗ ಮಾಲೀಕತ್ವ ಮತ್ತು ಹಕ್ಕಿನ ಬಗ್ಗೆ ನೋಡುತ್ತೇವೆ ಎಂದರೆ ಸರಿ. ಬರವಣಿಗೆ ಮಾಡುವ ಸಮಯದಲ್ಲಿ ಆಸ್ತಿ ಯಾರ ಹೆಸರಿನಲ್ಲಿತ್ತು ಎಂದು ನೋಡಿ ನಂತರ ಪತ್ರ ತಯಾರಿಸಿರುತ್ತೇನೆ.

ವಿಲ್ಲು ನಾಮೆಯನ್ನು ಆಸ್ತಿಗೆ ಸಂಬಂಧಿಸಿದ ದಾಖಲೆ ನೋಡಿ ತಯಾರಿಸಿರುತ್ತೇನೆ. ವಿಲ್ ಅನ್ನು ನಾನು ತಯಾರು ಮಾಡಿಲ್ಲ ಎಂದರೆ ಸರಿಯಲ್ಲ. ಬೇರೆಯವರು ತಯಾರು ಮಾಡಿದ್ದಾರೆ ಎಂದರೆ ಸರಿಯಲ್ಲ. ಆದ್ದರಿಂದ ಯಾವ ದಾಖಲೆ ನೋಡಿದ್ದೇನೆ ಎಂಬ ವಿಚಾರ ಗೊತ್ತಿಲ್ಲ ಎಂದರೆ ಸರಿಯಲ್ಲ. ವಿಲ್ ಆಸ್ತಿ ವಿಭಾಗ ಪತ್ರದ ಮೂಲಕ ಬಂದಿರುತ್ತದೆ. ಅದು ಜಂಟಿಯಾಗಿ ಬಂದಿರುತ್ತದೆ. ವಿಭಾಗ ಪತ್ರದ ಪ್ರಕಾರ ಅವರ ಗಂಡನಿಗೆ ಬಂದಿತ್ತು ಹೆಂಡತಿಗೆ ಬಂದಿರಲಿಲ್ಲ ಎಂದರೆ ಸರಿಯಲ್ಲ. ಮರಣ ಶಾಸನ ಬರೆಯುವಾಗ ಸರೋಜಮ್ಮ ರವರು ಆರೋಗ್ಯವಾಗಿ ಇರಲಿಲ್ಲ ಎಂದರೆ ಸರಿಯಲ್ಲ. ಷೆಡ್ಯೂಲ್ ಸರೋಜಮ್ಮ ರವರಿಗೆ ಫವತಿ ಖಾತೆ ಮೂಲಕ ಬಂದಿದೆ ಎಂದರೆ ಆ ಬಗ್ಗೆ ದಾಖಲೆ

ನೋಡಬೇಕು ಎದು ಸಾಕ್ಷಿ ನುಡಿದಿರುತ್ತಾರೆ. ವಿಲ್ ನಲ್ಲಿರುವ ಆಸ್ತಿಗಳು ಫವತಿ ಖಾತೆ ಮೂಲಕ ವರ್ಗಾವಣೆಯಾಗಿದೆ ಎಂದರೆ ಸರಿ. **2**ನೇ ಪ್ರತಿವಾದಿಗೆ ಯಾವುದೇ ಮೃತ್ಯು ಪತ್ರ ಬರೆದು ಕೊಟ್ಟಿಲ್ಲ, ಸರೋಜ ರವರಿಂದ ಅಕ್ರಮವಾಗಿ ಸಹಿ ಪಡೆದು ಮೃತ್ಯು ಪತ್ರ **2**ನೇ ಪ್ರತಿವಾದಿ ಸೃಷ್ಟಿಸಿರುತ್ತಾರೆ ಎಂದರೆ ಸರಿಯಲ್ಲ. ವಿಲ್ ಸಾಕ್ಷಿದಾರರನ್ನು **2**ನೇ ಪ್ರತಿವಾದಿ ಕರೆದುಕೊಂಡು ಬಂದಿದ್ದರು. ಮತ್ತೊಬ್ಬರು ವಕೀಲರಾಗಿರುತ್ತಾರೆ. ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಪ್ರಕಾರ ನನ್ನ ಬಳಿ ಬಂದು ಮಾಹಿತಿ ಕೊಟ್ಟಿಲ್ಲ, ಅದರ ಮೇಲೆ ನಾನು ವಿಲ್ ಬರೆದಿಲ್ಲ ಎಂದರೆ ಸರಿಯಲ್ಲ. ವಿಲ್ ತಯಾರಿಸುವಾಗ ಸರೋಜಮ್ಮ ರವರು ಅನಾರೋಗ್ಯದಿಂದ ಬಳಲುತ್ತಿದ್ದರು ಎಂದರೆ ಸರಿಯಲ್ಲ. ಅವರು ನನಗೆ ಮಾಹಿತಿ ಕೊಟ್ಟಿಲ್ಲ ಎಂದರೆ ಸರಿಯಲ್ಲ.

ಪಾಟಿ ಸವಾಲು ಮುಕ್ತಾಯವಾಯಿತು.

ಮರು ವಿಚಾರಣೆ ಇಲ್ಲ.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು** ಮಾಡಲಾಗಿದೆ**).**

ಸಹಿ/-

**ಓ ಹೇ ಕೇ ಸರಿ ಇದೆ**

**ಪ್ರ ದ ನ್ಯಾ ದಂ ಸೋ ಪೇಟೆ**